13.	ಬಿಜಾಪುರ	63	980
14.	ಕಾರವಾರ	54	881
15.	ಧಾರವಾಡ	178	1523
16.	ಮೈಸೂರು	89	1156
17.	ಮಂಡ್ಯ	99	990
18.	ಹಾಸನ	113	895
19.	ಚಿಕ್ಕಮಗಳೂರು	76	523
20.	ದಕ್ಷಿಣ ಕನ್ನಡ	206	976
21.	ಕೊಡಗು	86	277
	ಒಟ್ಟು	2500	18650

ತುಮಕೂರು ಜಿಲ್ಲೆಯಲ್ಲಿ ಉದ್ಯೋಗ ಭರವಸೆ ಯೋಜನೆ.

2526 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಗೆ 1995-96ನೇ ಸಾಲಿನಲ್ಲಿ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಬಂದ ಹಣವೆಷ್ಟು.

ಆ) 1995-96ನೇ ಸಾಲಿನಲ್ಲಿ ಇದಕ್ಕಾಗಿ ತಾಲ್ಲೂಕುವಾರು ಬಿಡುಗಡೆಯಾದ ಹಣವೆಷ್ಟು.

ಇ) ಖರ್ಚಾದ ಹಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ರೂ. 825 ಲಕ್ಷಗಳ ಅನುದಾನ ಬಿಡುಗಡೆ ಮಾಡಿರುತ್ತದೆ.

ಆ) ತಾಲ್ಲೂಕುವಾರು ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕು	ಬಿಡುಗಡೆಯಾದ ಹಣ	ಖರ್ಚಾದ ಹಣ (ಆರಂಭದ ಶಿಲ್ಕು ಸೇರಿಸಿ)
1.	ಕೊರಟಗೆರೆ	75.00	78.903
2.	ಮಧುಗಿರಿ	100.00	100.492
3.	ಪಾವಗಡ	75.00	81.730

4.	ಶಿರಾ	100.00	102.153
5.	ಚಿಕ್ಕನಾಯಕನಹಳ್ಳಿ	75.00	75.682
6.	ತಿಪಟೂರು	75.00	74.895
7.	ಗುಬ್ಬಿ	100.00	94.278
8.	ಕುಣಿಗಲ್	100.00	96.849
9.	ತುಮಕೂರು	100.00	102.052
10.	ತುರುವೇಕೆರೆ	25.00	-
	ಒಟ್ಟು	825.00	807.034

ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿ ಶಿಕ್ಷಣ ತರಗತಿಗಳನ್ನು ತೆರೆಯುವುದು.

2665 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ತರಗತಿಗಳನ್ನು ತೆರೆಯುವ ಯೋಜನೆ ಇದೆಯೇ? ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) ಗ್ರಾಮೀಣ ಜನರಿಗೆ ಅನುಕೂಲವಾದ ವೃತ್ತಿ ಶಿಕ್ಷಣ ಪಠ್ಯಕ್ರಮ ಯಾವುವು? (ವಿವರ ನೀಡುವುದು)

ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು) :

ಅ)

1978ರ ಪ್ರಾರಂಭದಿಂದಲೂ ವೃತ್ತಿ ಶಿಕ್ಷಣ ಕೋರ್ಸುಗಳನ್ನು ಗ್ರಾಮೀಣ ಪ್ರದೇಶಗಳಿಗೂ ನೀಡುತ್ತಾ ಬಂದಿದೆ. ಪ್ರಸ್ತುತ ಇರುವ ಒಟ್ಟು 1363 ಕೋರ್ಸುಗಳ ಪೈಕಿ 974 ಕೋರ್ಸುಗಳು ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿವೆ.

ಆ) 1) ಆರೋಗ್ಯ ಮತ್ತು ಅರೆ ವೈದ್ಯಕೀಯ ಸೇವೆಗಳು

2) ಕೃಷಿ ವಿಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳು

3) ಆಟೋಮೊಬೈಲ್ ಸರ್ವೀಸಿಂಗ್

4) ಟೂ-ವೀಲರ್ಸ್ ಸರ್ವೀಸಿಂಗ್

5) ಎಲೆಕ್ಟ್ರಿಕಲ್ ವೈರಿಂಗ್ ಮತ್ತು ಸರ್ವೀಸಿಂಗ್ ಆಫ್ ಎಲೆಕ್ಟ್ರಿಕಲ್ ಅಪ್ಲಯನ್ಸ್

6) ಕ್ಲಾಕ್ ಅಂಡ್ ವಾಚ್ ರಿಪೇರಿ ಟೆಕ್ನಾಲಜಿ

7) ಕ್ಲಾತಿಂಗ್ ಮತ್ತು ಎಂಬ್ರಾಯಡರಿ

8) ಟಿ.ವಿ.ಅಂಡ್ ರೇಡಿಯೋ ಸರ್ವೀಸಿಂಗ್

9) ಪೌಲ್ಟ್ರಿ ಸೈನ್ಸ್